ಪೌರತ್ವ ಶಿಕ್ಷಣದ ಮೂಲಕ ವಾಸ್ತವ ಬದುಕಿನ ಸವಾಲುಗಳ ನಿವಾರಣೆ

ನೇಹಾ ಯಾದವ್ ಮತ್ತು ಅಸ್ಮಿತಾ ತಿವಾರಿ

ಶಿಕ್ಷಣದ ಉದ್ದೇಶಗಳು (Aims of Education), ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ೨೦೦೫ (National Curriculum Framework, 2005) ರಂಥ ಶಿಕ್ಷಣ ಕ್ಷೇತ್ರದ ಮಾರ್ಗದರ್ಶಿ ದಸ್ತಾವೇಜುಗಳು ಮಾನವೀಯ ಮೌಲ್ಯಗಳ ಬಗ್ಗೆ ಅಲ್ಲದೆ ಸಾಂವಿಧಾನಿಕ ತತ್ವಗಳು, ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಜಾಗೃತಿ ಮೂಡಿಸುವ ಅಗತ್ಯತೆಯ ಬಗ್ಗೆ ನಿರಂತರವಾಗಿ ಒತ್ತಿ ಹೇಳಿವೆ. ಭಾರತೀಯ ಸಂದರ್ಭದಲ್ಲಿ ಪೌರರ ಹಕ್ಕು ಮತ್ತು ಕರ್ತವ್ಯಗಳ ಕುರಿತ ಜಾಗೃತಿಯನ್ನು ಅಂದರೆ ಪೌರತ್ವವನ್ನು ಬೆಳೆಸುವ ಜವಾಬ್ದಾರಿ ಶಾಲಾ ಶಿಕ್ಷಣದ್ದಾಗಿದೆ ಎಂಬುದಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ೨೦೦೫ (National Curriculum Framework 2005 -NCF 2005), ದೃಢವಾಗಿ ಹೇಳಿದೆ. ಅದೇ ರೀತಿಯಲ್ಲಿ, ಸಂವಿಧಾನದ ತತ್ವಗಳಿಗೆ ಬದ್ಧತೆಯನ್ನೂ ಬೆಳೆಸಬೇಕು ಎಂದು ಕೂಡ ಹೇಳಿದೆ.

ಇದನ್ನು ಸಾಧಿಸುವುದಕ್ಕೆ, ೨೦೦೫ರ ನಂತರ ಪಠ್ಯಕ್ರಮದಲ್ಲಿ ಹಲವು ಸುಧಾರಣೆಗಳನ್ನು ಮಾಡಲಾಗಿದೆ. ಆದರೆ ಇಂತಹ ಪ್ರಯತ್ನಗಳ ಹೊರತಾಗಿಯೂ, ವಿದ್ಯಾರ್ಥಿಗಳು ಮತ್ತು ಶಿಕ್ಷಕರೊಂದಿಗಿನ ನಮ್ಮ ಕೆಲಸದ ಅನುಭವ ಬೇರೆಯದನ್ನೇ ಹೇಳುತ್ತದೆ. ಪೌರನೀತಿ / ಸಾಮಾಜಿಕ ಮತ್ತು ರಾಜಕೀಯ ಜೀವನ ಪಠ್ಯವಸ್ತುವಿನ ಕುರಿತ ಅಭಿಪ್ರಾಯವು, ಇದು ಬಹುಪಾಲು ಸೈದ್ಧಾಂತಿಕವಾಗಿದೆ, 'ಪ್ರಸ್ತುತವಾಗಿಲ್ಲ' ಅಥವಾ 'ಅಭ್ಯಾಸಯೋಗ್ಯವಾಗಿಲ್ಲ' ಎನ್ನುವುದನ್ನು ಕೇಳಿಸಿಕೊಳ್ಳುತ್ತೇವೆ. ನಮ್ಮಂತಹ ದೇಶಕ್ಕೆ ಇದು ಒಳ್ಳೆಯ ಸೂಚನೆಯಲ್ಲ. ಅಂದರೆ, ಇದರಲ್ಲಿ ಅರ್ಥಮಾಡಿಕೊಳ್ಳಲು ಎರಡು ವಿಷಯಗಳಿವೆ. ಒಂದು, ನಮ್ಮ ಶಾಲೆಗಳಿಂದ ಪ್ರತಿವರ್ಷವೂ ಬಹಳ ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳು ಯಾವ ಬಗೆಯ ಪ್ರೇರಣೆಯೂ ಇಲ್ಲದೆ ಹೊರಬರುತ್ತಿದ್ದಾರೆ. ಅವರು ಮಾಹಿತಿ ಕೊರತೆಯನ್ನು ಮತ್ತು ಸಕ್ರಿಯ ನಾಗರಿಕರಾಗಿ ಕ್ರಿಯಾಶೀಲ ತೊಡಗಿಸಿಕೊಳ್ಳುವಿಕೆಗೆ ಬೇಕಾದ ವ್ಯಾವಹಾರಿಕ ಕೌಶಲಗಳಿಲ್ಲದವರು ಆಗಿರುತ್ತಾರೆ. ಎರಡು, ಕಳಪೆ ಆಡಳಿತದಿಂದ ಬಳಲುತ್ತಿರುವ ನಮ್ಮ ಹಳ್ಳಿ ಮತ್ತು ನಗರಗಳನ್ನು ಸರಕಾರಿ ಆಡಳಿತ ಯಂತ್ರದ ಜೊತೆ ಪೌರರ ಸಮರ್ಥ ಭಾಗವಹಿಸುವಿಕೆಯಿಂದ ಸರಿಪಡಿಸುವುದು ಸಾಧ್ಯವಿದೆ. ಆದರೆ ಈಗ ಆ ಲೋಪದ ನಿವಾರಣೆ ಮತ್ತಷ್ಟು ಮುಂದಕ್ಕೆ ಹೋಗುವಂತೆ ಆಗುತ್ತಿದೆ.

ಭಾರತದಲ್ಲಿ ತಿಳುವಳಿಕೆ, ಕ್ರಿಯಾಶೀಲತೆ ಮತ್ತು ಜವಾಬ್ದಾರಿ ಹೊಂದಿದ ನಾಗರಿಕರ ಸಂಖ್ಯೆಯನ್ನು ಹೆಚ್ಚಿಸುವ ಗುರಿಹೊಂದಿರುವ 'ವೀ ದ ಪೀಪಲ್ ಅಭಿಯಾನ್' ಎಂಬ ನಾಗರಿಕ ಸಾಮಾಜಿಕ ಸಂಘಟನೆಯು, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಸಾಮರ್ಥ್ಯಾಭಿವೃದ್ಧಿಯ ಉದ್ದೇಶವಿರುವ 'ಪೌರತ್ವ ಶಿಕ್ಷಣ ಕಾರ್ಯಕ್ರಮ' (Citizenship Education Programme - CEP) ಎಂಬ ಪಠ್ಯಕ್ರಮವನ್ನು ವಿವೇಚನಾಯುಕ್ತವಾಗಿ ವಿನ್ಯಾಸಗೊಳಿಸುವ ಮೂಲಕ ಈ ಅಂತರವನ್ನು ನಿವಾರಿಸಲು ಶ್ರಮಿಸುತ್ತಿದೆ. ಜವಾಬ್ದಾರಿ ಹೊಂದಿದ ನಾಗರಿಕತ್ವವನ್ನು ಬೆಳೆಸುವುದಕ್ಕೆ ಗುಣಮಟ್ಟದ ಪೌರ ಶಿಕ್ಷಣ ಮೂಲಭೂತ ಅವಶ್ಯಕತೆಯಾಗಿದೆ. ಇದನ್ನು ಪ್ರಾಥಮಿಕ ಶಾಲಾ ಶಿಕ್ಷಣದ ಕಾಲದಿಂದಲೇ ಪ್ರಾರಂಭಿಸುವುದು ಅತ್ಯುತ್ತಮ ಎಂಬ ಅಭಿಪ್ರಾಯವಿದೆ. ಪೌರತ್ವ ಶಿಕ್ಷಣ ಕಾರ್ಯಕ್ರಮವು ಸಾಮಾಜಿಕ ಮತ್ತು ರಾಜಕೀಯ ಜೀವನವನ್ನು ಪೌರನೊಬ್ಬನ/ಳ ದೃಷ್ಟಿಕೋನದಿಂದ ಅಧ್ಯಯನ ಮಾಡಬೇಕಾದ ವಿಷಯವಾಗಿ ಗ್ರಹಿಸುತ್ತದೆ. ಅದು, ಪ್ರಜಾತಂತ್ರ ವ್ಯವಸ್ಥೆಯಿರುವ ದೇಶದ ಓರ್ವ ಪೌರನಾಗಿ ಸಾಮಾಜಿಕ ಮತ್ತು ರಾಜಕೀಯ ಜೀವನ ಶಿಕ್ಷಣವು ತನಗೆ ತನ್ನ ಜೀವನದಲ್ಲಿ ಹೇಗೆ ಪ್ರಸ್ತುತವಾಗುತ್ತದೆ ಎಂಬ ಪ್ರಶ್ನೆಗೆ ಉತ್ತರಿಸುವ ಪ್ರಯತ್ನವನ್ನು ಮಾಡುತ್ತದೆ. ಈ ರೀತಿಯಲ್ಲಿ ವಿದ್ಯಾರ್ಥಿಗಳು ತರಗತಿ ಕೊಠಡಿಯೊಳಗೆ ಹೊಸಹೊಸ ವಿಧಾನಗಳನ್ನು ಮತ್ತು ಅವುಗಳ ಅನುಷ್ಠಾನ ಕ್ರಮಗಳನ್ನು ಪೌರ ಕ್ರಿಯಾ ಯೋಜನೆ (Civic Action Projects) ಮತ್ತು ಅಭಿಯಾನಗಳ ಮೂಲಕ ಪರಿಚಯ ಮಾಡಿಕೊಳ್ಳುತ್ತಾರೆ. ಅವರ ಕಲಿಕೆಯ ಪ್ರಯಾಣವು ಅವರ ಮನೋಧೋರಣೆ, ಜ್ಞಾನ ಮತ್ತು ಕೌಶಲಗಳ ಚೌಕಟ್ಟನ್ನು ಗಟ್ಟಿಗೊಳಿಸುವ ಬಗೆಯಲ್ಲಿ ಇರುತ್ತದೆ.

ನಮ್ಮ ಕಾರ್ಯವಿಧಾನ

ಈ ಕೆಳಗಿನ ಮೂರು ಮೂಲಭೂತ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವಂತೆ ನಮ್ಮ ಪಠ್ಯವಸ್ತುವನ್ನು ವಿನ್ಯಾಸಗೊಳಿಸಲಾಗಿದೆ

- ಪೌರರ ಮನೋಧೋರಣೆ / ದೃಷ್ಟಿಕೋನಗಳಲ್ಲಿ ಏನು ಬದಲಾವಣೆಗಳಾಗಬೇಕು?
- ನಾಗರಿಕ ಸಮಾಜದ ಶಿಕ್ಷಣಕ್ಕೆ ಯಾವ ಮಾಹಿತಿ ಮತ್ತು ಜ್ಞಾನಗಳ ಅವಶ್ಯಕತೆಯಿದೆ?
- ತಳಮಟ್ಟದ ಕ್ರಿಯೆಗೆ ಯಾವ ಕೌಶಲಗಳು ಮತ್ತು ಪರಿಕರಗಳ ಅವಶ್ಯಕತೆಯಿದೆ?

ವಿಷಯವಸ್ತುವನ್ನು ಈ ಕೆಳಗಿನ ಚೌಕಟ್ಟಿನ ಸುತ್ತ ಗುರುತಿಸಲಾಗಿದೆ:

ಮನೋಧೋರಣೆ	ಜ್ಞಾನ	ಕೌಶಲಗಳು
ಒಂದು ಪರಿಕಲ್ಪನೆಯಿದ್ದರೆ ಅದು 'ಯಾಕೆ' ಇದೆ? ಉದಾಹರಣೆಗೆ ನಮಗೆ ಸ್ವಾತಂತ್ರ್ಯ ಯಾಕೆ ಬೇಕು, ಯಾಕೆ ಸಮಾನತೆ ಮಹತ್ವದ್ದಾಗುತ್ತದೆ, ಇತ್ಯಾದಿ.	ಒಂದು ಪರಿಕಲ್ಪನೆಯಿದ್ದರೆ ಅದು 'ಏನು'? ಉದಾಹರಣೆಗೆ ಮೂಲಭೂತ ಹಕ್ಕುಗಳು ಯಾವುವು, ಕಾನೂನು ಅಂದರೆ ಏನು, ರಾಜ್ಯ ವ್ಯವಸ್ಥೆಯ ಸಂರಚನೆ ಏನು, ಇತ್ಯಾದಿ.	ಕ್ರಿಯೆಯನ್ನು ಕೈಗೊಳ್ಳುವುದು 'ಹೇಗೆ'? ಉದಾಹರಣೆಗೆ, ಯಾವುದೇ ಕ್ರಿಯೆಗೆ ಬೇಕಾಗುವ ಕೌಶಲಗಳು ಅಥವಾ ಪರಿಕರಗಳು.

ಒಬ್ಬ ಪೌರನು ಸಂವಿಧಾನದ ವಿವಿಧ ಅಂಶಗಳೊಂದಿಗೆ ಅವು ಏನು ಮತ್ತು ಯಾಕೆ ಎಂಬ ದೃಷ್ಟಿಕೋನದಿಂದ ಅವುಗಳನ್ನು ಅರ್ಥಮಾಡಿಕೊಳ್ಳುತ್ತ ತೊಡಗಬೇಕಾಗುತ್ತದೆ. ಅದರ ಜೊತೆಗೆ ಪೌರ ಸಮಾಜದ ಕ್ರಿಯೆಗೆ ವ್ಯಾವಹಾರಿಕವಾಗಿ ಅನ್ವಯಿಸಿಕೊಳ್ಳುವ ಪರಿಕರಗಳು ಕೂಡ ಸೇರಿಕೊಳ್ಳುತ್ತವೆ. ನಾವು ಪೌರತ್ವ ಶಿಕ್ಷಣ ಕಾರ್ಯಕ್ರಮವನ್ನು ಶಾಲಾ ಪಠ್ಯಕ್ರಮದ ಜೊತೆ ಸಮನ್ವಯಗೊಳಿಸುವುದಕ್ಕೆ ಪ್ರಯತ್ನಿಸುತ್ತೇವೆ. ಜೊತೆಗೆ, ಸಮಾಜ ವಿಜ್ಞಾನ ಶಿಕ್ಷಕರಿಗಾಗಿ ತರಬೇತುದಾರರ ತರಬೇತಿಯನ್ನೂ (Training of Trainer -TOT) ವಿನ್ಯಾಸಗೊಳಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಪಠ್ಯಕ್ರಮದ ವಿವಿಧ ಅಂಶಗಳನ್ನು ಗುರುತಿಸಿ–ಕೊಳ್ಳುವುದು ಅತ್ಯಗತ್ಯವಾದ ಒಂದು ಕ್ರಮವಾಗಿದೆ. ಅದರ ಮೂಲಕ ನಾವು ಪೌರತ್ವ ಶಿಕ್ಷಣ ಕಾರ್ಯಕ್ರಮ ಮತ್ತು ಸಾಮಾಜಿಕ ಮತ್ತು ರಾಜಕೀಯ ಜೀವನ ಪಠ್ಯಕ್ರಮಗಳ ಮಧ್ಯೆ ಬಲವಾದ ಸಂಬಂಧವನ್ನು ಸೃಷ್ಟಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

'ವಿದ್ಯಾರ್ಥಿಗಳಲ್ಲಿ ಪೌರ ನೀತಿ ವಿಷಯದಲ್ಲಿ ಆಸಕ್ತಿಯನ್ನು ಮೂಡಿಸುವುದಕ್ಕೆ ಈ ಚಟುವಟಿಕೆಗಳು ಸಹಾಯಮಾಡಿದವು. ವಿದ್ಯಾರ್ಥಿಗಳಿಗೆ ತಮ್ಮ ಪಠ್ಯವಿಷಯದ ಮೌಲಿಕತೆಯನ್ನು ಮತ್ತು ಪ್ರಸ್ತುತತೆಯನ್ನು ಕಾಣುವುದಕ್ಕೂ ಅವು ನೆರವಾದವು.

– ಮಾರ್ಗದರ್ಶಿ ಶಿಕ್ಷಕ, ಶಿಕ್ಷಣ ನಿರ್ದೇಶನಾಲಯ, ನವದೆಹಲಿ

'ಈ ಎಲ್ಲಾ ವಸ್ತು ವಿಷಯ ಮತ್ತು ವಿಧಾನಗಳು ಕೊನೆಯದಾಗಿ ತರಗತಿಯೊಳಗೆ ಎಷ್ಟು ಕಾರ್ಯರೂಪಕ್ಕೆ ಬಂದೀತು ಎಂಬುದು ನನಗೆ ತಿಳಿಯುತ್ತಿಲ್ಲ. ಆದರೆ ಎಲ್ಲರ ಪರವಾಗಿ ನಾನು ಒಂದು ಹೇಳಬಲ್ಲೆ. ನಾವು ಯಾರೂ 6 ತಿಂಗಳ ಹಿಂದೆ ಇದ್ದ ಶಿಕ್ಷಕರಾಗಿ ಈಗ ಉಳಿದಿಲ್ಲ.

– ಖಾಸಗಿ ಶಾಲೆ ಶಿಕ್ಷಕಿ, ಪುಣೆ, ಮಹಾರಾಷ್ಟ್ರ

ಪೌರ ಕ್ರಿಯಾ ಯೋಜನೆಗಳು

ಕ್ರಿಯೆಯೇ ಪ್ರಧಾನವಾದ ಈ ವಿಧಾನವನ್ನು ದೆಹಲಿ– ರಾಷ್ಟ್ರೀಯ ರಾಜಧಾನಿ ಪ್ರದೇಶ ಮತ್ತು ಮಹಾರಾಷ್ಟ್ರದ ಹಲವು ಶಾಲೆಗಳಲ್ಲಿ ಕಾರ್ಯರೂಪಕ್ಕೆ ತರಲಾಗಿದ್ದು, ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ತೊಡಗಿಸಿ ಸಬಲಗೊಳಿಸುವುದು ಇದರ ಉದ್ದೇಶವಾಗಿದೆ. ವಿದ್ಯಾರ್ಥಿಗಳು ತಮ್ಮ ಪರಿಸರಕ್ಕೆ ಸಂಬಂಧಿಸಿದ ಒಂದು ಸಾರ್ವಜನಿಕ ಸಮಸ್ಯೆಯನ್ನು ಆರಿಸಿ, ಅದರ ಬಗ್ಗೆ ಮಾಹಿತಿ ಪಡೆದುಕೊಂಡು, ಸಾರ್ವಜನಿಕ ಕ್ರಿಯೆಯನ್ನು ಕೈಗೆತ್ತಿಕೊಳ್ಳಲು ಬೇಕಾದ ಅಗತ್ಯ ಜ್ಞಾನ ಮತ್ತು ಕೌಶಲಗಳನ್ನು ಗಳಿಸಿ, ನಂತರ ಸಮಸ್ಯೆಯ ಪರಿಹಾರಕ್ಕೆ ಅಧಿಕಾರಿಗಳ ಜೊತೆ ಆಪ್ತವಾಗಿ ಹೇಗೆ ಕೆಲಸ ಮಾಡಬಹುದು ಎಂದೂ ಮುಂದಾಲೋಚಿಸುತ್ತಾರೆ. ಈ ಕಾರ್ಯ ಯೋಜನೆ ವಿದ್ಯಾರ್ಥಿಗಳಿಗೆ ನಿಜ ಜೀವನದ ಸಮಸ್ಯೆಗಳನ್ನು ತಾವು ಕಲಿತ ಸಾಮರ್ಥ್ಯಗಳನ್ನು ಅನ್ವಯಿಸಿಕೊಂಡು ಪರಿಹರಿಸಿಕೊಳ್ಳುವ ಅವಕಾಶಗಳನ್ನು ಸೃಷ್ಟಿಸುತ್ತದೆ. ಆ ಮೂಲಕ ಜವಾಬ್ದಾರಿಯುತ ಮತ್ತು ಕ್ರಿಯಾಶೀಲ ಪೌರತ್ವದ ಅಂಶಗಳನ್ನು ಸ್ವತಃ ಮೈಗೂಡಿಸಿಕೊಳ್ಳುವ ಅನುಭವಗಳನ್ನು ಪಡೆಯುತ್ತಾರೆ.

ಪೌರ ಕ್ರಿಯಾ ಯೋಜನೆಯು ವಿದ್ಯಾರ್ಥಿಗಳ ಮೇಲೆ ಬೀರಿದ ಪರಿಣಾಮಗಳನ್ನು ಮೌಲ್ಯಮಾಪನ ಮಾಡಲು ನಾವು ಒಂದು ಅಧ್ಯಯನವನ್ನು ನಡೆಸಿದೆವು. ಇದನ್ನು ಮಾಡುವುದಕ್ಕೆ, ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಅಳೆಯುವುದಕ್ಕಾಗಿ ನಾವು ವಿದ್ಯಾರ್ಥಿಗಳ ಎರಡು ಗುಂಪುಗಳನ್ನು ರಚಿಸಿದೆವು – ಒಂದು ನಿಯಂತ್ರಿತ ಗುಂಪು ಮತ್ತು ಇನ್ನೊಂದು ಪ್ರಾಯೋಗಿಕ ಗುಂಪು. ತಮ್ಮ ಯೋಜನೆಯನ್ನು ಬರವಣಿಗೆಯಲ್ಲಿ ನಿರೂಪಿಸುವುದಕ್ಕಾಗಿ ಈ ಎರಡು ಗುಂಪುಗಳು ತಮ್ಮ ಪೌರ ಜ್ಞಾನ, ಕೌಶಲಗಳು ಮತ್ತು ಮನೋಧೋರಣೆಯ ಹೇಗೆ ಬಳಸಿದವು ಎಂಬುದರ ಮೌಲ್ಯ–ಮಾಪನ ಮಾಡುವುದು ಮತ್ತು ಈ ಗುಂಪುಗಳು ತಯಾರಿಸಿದ ಯೋಜನೆಯಲ್ಲಿ ಗುಣಾತ್ಮಕವಾದ ವ್ಯತ್ಯಾಸಗಳಿದ್ದರೆ ಅವನ್ನು ದಾಖಲಿಸುವುದು ಈ ಅಧ್ಯಯನದ ಉದ್ದೇಶವಾಗಿತ್ತು.

ಈ ಅಧ್ಯಯನದ ಫಲಿತಗಳು ಹೊರಗೆಡಹಿದ ಒಳನೋಟವೆಂದರೆ: ತರಬೇತಿ ಪಡೆದ ಪ್ರಾಯೋಗಿಕ ವಿದ್ಯಾರ್ಥಿಗಳ ಪೌರ ಜ್ಞಾನ, ಕೌಶಲಗಳು ಮತ್ತು ಮನೋಧೋರಣೆಯು ನಿಯಂತ್ರಿತ ಗುಂಪಿನ ವಿದ್ಯಾರ್ಥಿಗಳಿಗೆ ಹೋಲಿಸಿದರೆ ಗಮನಾರ್ಹವಾಗಿ ಹೆಚ್ಚಿನ ಮಟ್ಟದಲ್ಲಿತ್ತು. ಪ್ರಾಯೋಗಿಕ ಗುಂಪಿನ ವಿದ್ಯಾರ್ಥಿಗಳು ರೂಪಿಸಿದ ಕ್ರಿಯಾಯೋಜನೆಯಲ್ಲಿ ಸಮಗ್ರ ಸಂಶೋಧನೆ ಮತ್ತು ವ್ಯವಸ್ಥಿತ ಅನುಷ್ಠಾನದ ಅಂಶಗಳು ಎದ್ದುಕಾಣುತ್ತಿದ್ದವು. ಅದರಲ್ಲಿ ಸರಕಾರಿ ಅಧಿಕಾರಿಗಳ ಜೊತೆ ಕೆಲಸ ಮಾಡುವಾಗ ಲಿಖಿತ ಮೂಲಕ ಸಂವಹನ ಮಾಡುವುದು ಮೊದಲಾದ ಹಲವು ಸರಳ ತಂತ್ರಗಾರಿಕೆಗಳಿದ್ದವು. ಇದಕ್ಕೆ ವ್ಯತಿರಿಕ್ತವಾಗಿ, ನಿಯಂತ್ರಿತ ಗುಂಪಿನ ವಿದ್ಯಾರ್ಥಿಗಳ ಕ್ರಿಯಾ–ಯೋಜನೆಯನ್ನು ಗಮನಿಸಿದಾಗ, ಅವರಲ್ಲಿ ಕ್ರಿಯೆಗೆ ಇಳಿಯುವ ಮನಸ್ಸು ಮತ್ತು ಆ ಸಮಸ್ಯೆಯನ್ನು ಬಗೆಹರಿಸುವ ಕುರಿತು ಸಮರ್ಪಕ ದೃಷ್ಟಿಕೋನ ಕಂಡುಬಂದರೂ, ಅವರ ಪೌರ ಕ್ರಿಯೆಯನ್ನು ಸಮರ್ಥಿಸುವುದಕ್ಕೆ ಬೇಕಾದ ಜ್ಞಾನ ಮತ್ತು ಕೌಶಲಗಳ ಕೊರತೆಯಿಂದ ಕಷ್ಟಪಡುವುದು ಕಂಡುಬಂದಿತು.

ಪ್ರಾಯೋಗಿಕ ಗುಂಪಿನ ವಿದ್ಯಾರ್ಥಿಗಳಿಗೆ ತಮ್ಮ ತರಬೇತಿ ಯೋಜನೆಯೊಳಗೆ ಕೈಗೊಂಡಂತಹ ಚಟುವಟಿಕೆಗಳನ್ನು ಆಧರಿಸಿ ಪೌರ ಕ್ರಿಯಾ ಯೋಜನೆಯನ್ನು ರೂಪಿಸುವುದಕ್ಕೆ ಸಾಧ್ಯವಾಗಿತ್ತು. ಅಲ್ಲದೆ ಅವರು ಮೂಲಭೂತ ಹಕ್ಕುಗಳು ಮತ್ತು ಸಾಂವಿಧಾನಿಕ ಬದ್ಧತೆಗಳಂತಹ ಪಠ್ಯವಿಷಯದ ಪರಿಕಲ್ಪನೆಗಳನ್ನು ತಮ್ಮ ಯೋಜನೆಯ ಅನುಮಾನಿತ ಸಿದ್ಧಾಂತದ ವಿಷಯಗಳಿಗೆ ಜೋಡಿಸಲು ಸಮರ್ಥರಾಗಿದ್ದರು.

ತಮ್ಮ ಪೌರ ಕ್ರಿಯಾ ಯೋಜನೆಯ ಅನುಷ್ಠಾನದಿಂದ ಪ್ರಾಯೋಗಿಕ ಗುಂಪಿನ ವಿದ್ಯಾರ್ಥಿಗಳು ತಮ್ಮ ಪೌರ ಸಾಮರ್ಥ್ಯಗಳಲ್ಲಿ ಗಮನಾರ್ಹ ವೃದ್ಧಿ ಗಳಿಸಿಕೊಂಡರು ಎಂಬುದು ಸ್ಪಷ್ಟವಾಗಿದೆ. ಇನ್ನೊಂದೆಡೆ ನಿಯಂತ್ರಿತ ಗುಂಪಿನ ವಿದ್ಯಾರ್ಥಿಗಳಿಗೆ ಪೌರ ಕ್ರಿಯೆಯ ಮಹತ್ವ ಮತ್ತು ಅದಕ್ಕೆ ಮುಂದಾಗುವ ಪ್ರಬಲ ಇಚ್ಛೆ ಇದ್ದರೂ, ಅದನ್ನು ಪರಿಣಾಮಕಾರಿಯಾಗಿ ಕ್ರಿಯೆಗೆ ಇಳಿಸುವುದಕ್ಕೆ ಬೇಕಾದ ಜ್ಞಾನ ಮತ್ತು ಕೌಶಲಗಳ ಕೊರತೆ ಇತ್ತು. 'ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳುವುದಕ್ಕೆ, ಮೊದಲಿಗೆ ನಾವು, ಸಂವಿಧಾನದಲ್ಲಿ ಇದಕ್ಕೆ ಸಂಬಂಧಿಸಿ ಒದಗಿಸಲಾದ ಹಕ್ಕುಗಳು ಮತ್ತು ಅವುಗಳ ಜಾರಿಗೆ ಮಾಡಿರುವ ನಿಯಮಗಳೇನು ಎಂಬುದನ್ನು ನೋಡಬೇಕಾಗಿದೆ'.

'ನಾವು ನಗರಸಭೆ ಕಚೇರಿಗೆ ತೆರಳಿ ಒಂದು ದೂರನ್ನು ನೀಡುತ್ತೇವೆ. ನಂತರ ಅವರು ಅದನ್ನು ಕ್ರಮಬದ್ಧವಾಗಿ ದಾಖಲಿಸಿಕೊಂಡರೇ ಎಂದು ಗಮನಿಸುತ್ತೇವೆ. ಅವರು ನಮ್ಮ ದೂರನ್ನು ಸ್ವೀಕರಿಸದಿದ್ದರೆ, ಆಗ ನಾವು, ಶಾಲೆಯ ಎಲ್ಲಾ ವಿದ್ಯಾರ್ಥಿಗಳೂ ಸೇರಿ, ದೇಣಿಗೆ ಸಂಗ್ರಹಿಸಿ, ಒಳಚರಂಡಿಯ ಕೆಲಸವನ್ನು ನಾವೇ ಮಾಡಿ ಮುಗಿಸುತ್ತೇವೆ.'

– ಅಧ್ಯಯನದಲ್ಲಿ ಭಾಗಿಗಳಾದ ವಿದ್ಯಾರ್ಥಿಗಳ ಪ್ರತಿಕ್ರಿಯೆ

ಅನುಕೂಲಗಳು ಮತ್ತು ಫಲಿತಗಳು

ಒಂದು ಶಾಲಾ ವ್ಯವಸ್ಥೆಯೊಳಗೆ ಒಂದು ಸುಯೋಜಿತ ಪೌರ ಕ್ರಿಯಾ ಯೋಜನೆಯನ್ನು ವಿನ್ಯಾಸಗೊಳಿಸುವುದಕ್ಕೆ ಸಾಧ್ಯವಿದೆ ಎಂಬುದನ್ನು ನಮ್ಮ ಅನುಭವಗಳು ಮತ್ತು ಪರಿಣಾಮದ ಮೌಲ್ಯಮಾಪನವು ಎತ್ತಿ ತೋರಿಸುತ್ತದೆ. ಸಾಮಾಜಿಕ ಮತ್ತು ರಾಜಕೀಯ ಜೀವನವನ್ನು ಬೋಧಿಸುವ ಶಿಕ್ಷಕರಿಗೆ ಪೌರ ಕ್ರಿಯಾ ಯೋಜನೆ ಎಂಬುದು ಪ್ರತ್ಯಕ್ಷ ಅನುಭವಗಳನ್ನು ಒದಗಿಸುವುದಕ್ಕೆ ಒಂದು ದೊಡ್ಡ ಪರಿಕರವಾಗಿದೆ. ಅದು ಕಲಿಕೆಯು ಹೆಚ್ಚು ಪ್ರಾಯೋಗಿಕವಾಗುವಂತೆ ಮತ್ತು ಕೌಶಲಾಧಾರಿತವಾಗುವಂತೆ ಮಾಡುತ್ತದೆ.

ಮಜಲ್‌ಗಾಂವ್‌ನಲ್ಲಿ ವಿದ್ಯಾರ್ಥಿಗಳು ದೊರಕಿಸಿದ ಬೀದಿ-ದೀಪಗಳು

ಮಹಾರಾಷ್ಟ್ರದ ಬೀಡ್ ಜಿಲ್ಲೆಯ ಮಜಲ್‌ಗಾಂವ್‌ನ ಮಹಾತ್ಮಾ ಫುಲೆ ವಿದ್ಯಾಲಯದ ವಿದ್ಯಾರ್ಥಿಗಳು ತಮ್ಮ ಪೌರ ಕ್ರಿಯಾ ಯೋಜನೆಯೊಂದಿಗೆ ತೊಡಗಿದ ಒಂದು ಸಂದರ್ಭದಲ್ಲಿ ತಮ್ಮ ಶಾಲೆಯ ಸುತ್ತಲಿನ ಬೀದಿದೀಪಗಳು ಹಾಳುಬಿದ್ದಿದ್ದ ವಿಷಯವನ್ನು ಆರಿಸಿ ಕಾರ್ಯನಿರ್ವಹಿಸಿದರು. ಅವರು ಸಮಸ್ಯೆಯನ್ನು ಸರಿಯಾಗಿ ಅಧ್ಯಯನ ಮಾಡಿ, ಸಮರ್ಪಕವಾದ ಅಂಕಿಅಂಶಗಳು ಮತ್ತು ಆ ಸ್ಥಳದಲ್ಲಿ ಜಾರಿ ಮಾಡಬೇಕಿದ್ದ ಕಾರ್ಯಯೋಜನೆಯೊಂದಿಗೆ ತಮ್ಮ ಅಹವಾಲನ್ನು ಮಜಲ್‌ಗಾಂವ್‌ನ ಪುರಸಭೆಗೆ ಸಲ್ಲಿಸಿದ್ದರು. ಅದರ ನಿರಂತರ ಅನುಪಾಲನೆ ಮತ್ತು ಅಧಿಕಾರಿಗ-ಳೊಂದಿಗೆ ವಿದ್ಯಾರ್ಥಿಗಳ ಸಭೆಯ ನಂತರ ಬೀದಿದೀಪಗಳ ಸ್ಥಾಪನೆ ಆಗಿಹೋಯಿತು.

ವಿದ್ಯಾರ್ಥಿಗಳು ಶಿಕ್ಷಣ ಹಕ್ಕು ಕಾಯ್ದೆಯನ್ನು ಬಳಸಿ ತಮ್ಮ ಶಾಲೆಗೆ ಆವರಣ ಗೋಡೆಯನ್ನು ಪಡೆದರು

ಮಹಾರಾಷ್ಟ್ರದ ಸತಾರಾ ಜಿಲ್ಲೆಯ ಮಹಾತ್ಮಾ ಫುಲೆ ಮಾಧ್ಯಮಿಕ ಆಶ್ರಮ ಶಾಲೆಯ ವಿದ್ಯಾರ್ಥಿಗಳು ತಮ್ಮ ಶಾಲೆಯ ಸುತ್ತ ಆವರಣ ಗೋಡೆಯನ್ನು ನಿರ್ಮಿಸುವಂತೆ ಕಾಟ್‌ಗುಣ್ ಗ್ರಾಮ ಪಂಚಾಯ್ತಿಗೆ ಅರ್ಜಿ ಸಲ್ಲಿಸಿದರು. ಶಾಲೆಯ ಆವರಣವು ಪಂಚಾಯ್ತಿಗೆ ಸೇರಿದ್ದು, ಅದನ್ನು ಶಾಲೆಯು ಲೀಸ್ ಕರಾರಿನ ಮೇಲೆ ಬಳಕೆ ಮಾಡುತ್ತಿತ್ತು. ವಿದ್ಯಾರ್ಥಿಗಳು ತಮ್ಮ ಅರ್ಜಿಯ ಜೊತೆಗೆ, ಪ್ರತಿ ಶಾಲೆಯ ಸುತ್ತಲೂ ಆವರಣ ಗೋಡೆಯಿರುವುದು ಕಡ್ಡಾಯ ಎಂಬುದನ್ನು ತಿಳಿಸುವ ಶಿಕ್ಷಣ ಹಕ್ಕು ಕಾಯಿದೆ 2009ರ (Right to Education Act, 2009) ಪ್ರತಿಯನ್ನು ಲಗತ್ತಿಸಿದ್ದರು.


ಅರ್ಜಿಯು ಜನವರಿ ತಿಂಗಳಿನಲ್ಲಿ ಸಲ್ಲಿಕೆಯಾಗಿತ್ತು. ಮುಂದೆ ವಿದ್ಯಾರ್ಥಿಗಳು ಒಂದೆರಡು ತಿಂಗಳು ಆ ಅರ್ಜಿಯ ಪ್ರಗತಿಯ ಬಗ್ಗೆ ನಿರಂತರ ಗಮನಹರಿಸಿದರು. ಗ್ರಾಮ ಪಂಚಾಯಿತಿಯು ತನ್ನ ಆಯವ್ಯಯ ಪಟ್ಟಿಯಿಂದ ರೂಪಾಯಿ 1,21,000/ವನ್ನು ಖರ್ಚುಮಾಡಿ, ಬಹಳ ದಿನಗಳ ಬೇಡಿಕೆಯಾಗಿದ್ದ ಆವರಣ ಗೋಡೆಯನ್ನು ನಿರ್ಮಿಸಿಕೊಟ್ಟಿತು.



ಸಾಂವಿಧಾನಿಕ ಮೌಲ್ಯಗಳ ಬಗ್ಗೆ ಅಭಿಯಾನ

ಇಂತಹ ಒಂದು ಸಂವಾದಕ್ಕೆ ಸರಳವಾಗಿಯಾದರೂ ಬಹು-ಮುಖ್ಯವಾದ ಸಂಪನ್ಮೂಲ ಬೇಕಾಗುತ್ತದೆ: ಅದೆಂದರೆ ವ್ಯಕ್ತಿಗಳ, ವಿಶೇಷವಾಗಿ ಭವಿಷ್ಯದ ಯುವ ಪೌರರ ನಿಜ ಅನುಭವಗಳಾಗಿವೆ. ನಾವು, ಕಳೆದ ಕೆಲವು ವರ್ಷಗಳಿಂದ ನವದೆಹಲಿಯ ಶಿಕ್ಷಣ ನಿರ್ದೇಶನಾಲಯದ ಮಾರ್ಗದರ್ಶಿ ಶಿಕ್ಷಕರ ಜೊತೆ ಕಾರ್ಯ-ನಿರ್ವಹಿಸುತ್ತಿದ್ದೇವೆ. ಅಲ್ಲದೆ ಸರಕಾರಿ ಶಾಲೆಗಳ ವಿದ್ಯಾರ್ಥಿಗಳು ಮತ್ತು ಅವರ ಎಲ್ಲಾ ವಿಷಯ ಶಿಕ್ಷಕರೊಂದಿಗೂ 'ಸಂವಿಧಾನ 70ರ ಹೊಸ್ತಿಲಲ್ಲಿ' (The Constitution at 70) ಸಾಂವಿಧಾನಿಕ ಮೌಲ್ಯಗಳ ಕುರಿತಾದ ಮಾಹಿತಿ ಅಭಿಯಾನ ಎಂಬುದರ ಕುರಿತೂ ತೊಡಗಿಕೊಂಡಿದ್ದೇವೆ.

ನಾವು ನಿರಂತರ ತೊಡಗಿಕೊಂಡಿದ್ದ ವಿವಿಧ ಶಾಲೆಗಳ ಶಿಕ್ಷಕ ಮತ್ತು ವಿದ್ಯಾರ್ಥಿ ಸಮುದಾಯದ ಒಂದು ಗುಂಪಿನ ಜೊತೆ ಈ ಅಭಿಯಾನದ ಪರಿಣಾಮವನ್ನು ಅಧ್ಯಯನ ಮಾಡಿದ್ದೇವೆ. ವಿವಿಧ ಶಾಲೆಗಳ ವಿದ್ಯಾರ್ಥಿಗಳು ವಿಭಿನ್ನ ಸಾಂಸ್ಕೃತಿಕ ಮತ್ತು ಸಾಮಾಜಿಕ ಹಿನ್ನೆಲೆಗಳಿಂದ ಬಂದಿದ್ದರಾದರೂ, ಅವರ ಚಿಂತನೆ ಒಂದು ನಿರ್ಣಾಯಕ ಅಂಶದ ಸುತ್ತವೇ ಇತ್ತು – ಅದು ಸಂವಿಧಾನದ ಪ್ರಸ್ತಾವನೆಯ ಅಂಶಗಳು. ಅವರು ನಮ್ಮ ಅಭಿಯಾನದ ಭಾಗವಾಗಿ, ಅವರ ಸುತ್ತುಮುತ್ತಲಿನ ಇತರ ವ್ಯಕ್ತಿಗಳ ಗುಂಪಿನ ಜೊತೆ ಸಂವಾದ ನಡೆಸಬೇಕಿತ್ತು. ಉದಾಹರಣೆಗೆ, ಅವರಲ್ಲಿ ಪ್ರತಿಯೊಬ್ಬರೂ ತಮ್ಮ ಕುಟುಂಬದ ಸದಸ್ಯರ ಜೊತೆಗೆ ಮತ್ತು ನೆರೆಹೊರೆಯ ವ್ಯಕ್ತಿಗಳ ಜೊತೆಗೆ ಸಂವಾದ ನಡೆಸಬೇಕಿತ್ತು. ಇಂತಹ ಗುಂಪುಗಳು ಎಲ್ಲರಿಗೂ ಒಂದೇ ತೆರನಾಗಿ ಇದ್ದ ಕಾರಣ, ಅದು ಎಲ್ಲರಿಗೂ ಸಮವಾಗಿ ನೆರವಾಯಿತು. ಜನರಿಗೆ ಸಾಂವಿಧಾನಿಕ ಮೌಲ್ಯಗಳು ಅಂದರೆ ಏನು ಎಂಬುದನ್ನು ಪ್ರತ್ಯಕ್ಷ ಕಾಣುವುದಕ್ಕಾಯಿತು. ಹೇಗೆ ಅವರ ದಿನನಿತ್ಯದ ಬದುಕಿನಲ್ಲಿ ಅವುಗಳ ಜೊತೆಗೇ ವ್ಯವಹರಿಸುತ್ತಾರೆ ಎಂಬುದನ್ನು ತಿಳಿಯುವುದಕ್ಕಾಯಿತು.



ಅಭಿಯಾನದ ಪರಿಣಾಮದ ಮೌಲ್ಯಮಾಪನದ ಉದಾಹರಣೆ

ಇಂತಹ ಒಂದು ಪ್ರಜ್ಞೆಯನ್ನು ಅಂತರ್ಗತಗೊಳಸುವುದಕ್ಕೆ ಮತ್ತು ಇಂತಹ ಒಂದು ಮೌಲ್ಯದ ದೃಷ್ಟಿಕೋನವನ್ನು ಯುವ ಪೌರರಲ್ಲಿ ಬೆಳೆಸುವುದಕ್ಕೆ ಪ್ರಯತ್ನಿಸಿದ್ದರಿಂದ ಸಂವಿಧಾನದ ಪ್ರಸ್ತಾವನೆಯ (Preamble) ಆಶಯದೊಂದಿಗೆ ಕೆಲಸವನ್ನು ಮುಂದುವರೆಸುವುದು ಸುಲಭವಾಯಿತು. ಅಷ್ಟಲ್ಲದೆ ಎಲ್ಲಾ ವಿಷಯ ಶಿಕ್ಷಕರೂ ಈ ಅಭಿಯಾನದಲ್ಲಿ ಭಾಗಿಗಳಾಗುವಂತೆ ನಾವು ಖಾತ್ರಿಪಡಿಸಿದ್ದೆವು. ಆ ಮೂಲಕ ಶಿಕ್ಷಕರೂ ಸಾಂವಿಧಾನಿಕ ಮೌಲ್ಯಗಳ ಜೊತೆ ತೊಡಗಿಕೊಳ್ಳುವುದಕ್ಕೆ ಸಾಧ್ಯವಾಯಿತು. ತಮ್ಮ ನೈಜ ಅನುಭವಗಳನ್ನು ಪಠ್ಯದ ವಿಷಯಗಳ ಜೊತೆ ಸಮೀಕರಿಸಿದ್ದರಿಂದ ಶಿಕ್ಷಕರೂ ವಿದ್ಯಾರ್ಥಿಗಳೂ ಸಮವಾಗಿಯೇ ಪ್ರಸ್ತಾವನೆಯ ಸಾರವನ್ನು (Essence of the Preamble) ಆಸಕ್ತಿ ಬೆಳೆಸಿಕೊಳ್ಳಲು ಸಾಧ್ಯವಾಯಿತು.

ಈ ಅಭಿಯಾನದಿಂದಾಗಿ ವಿದ್ಯಾರ್ಥಿಗಳ ಮನಸ್ಸಿನಲ್ಲಿದ್ದ ಮತ್ತು ಜಾತಿ ಆಧಾರಿತ ಭೇದಭಾವದ ಹಲವು ಸಿದ್ಧಮಾದರಿಗಳು ಒಡೆದುಹೋದವು. ಈ ಮೊದಲು, ಕೆಲವರು ತಮ್ಮ ಆರ್ಥಿಕ ಸ್ಥಾನಮಾನಕ್ಕೆ ಸಮನಲ್ಲದವರ ಜೊತೆ ಮಾತಾಡುತ್ತಿರಲಿಲ್ಲ. ಆದರೆ ಅದೀಗ ಹಳೆಯ ಕಥೆ ಎಂಬಂತೆ ಆಘಿದೆ.

– ಶಿಕ್ಷಕರು, ಸರಕಾರಿ ಬಾಲಕರ ಹಿರಿಯ ಪ್ರಾಥಮಿಕ ಶಾಲೆ, ನವದೆಹಲಿ

ಮುಕ್ತಾಯ

ಪೌರ ಶಿಕ್ಷಣವು ಅಡೆತಡೆಯಿಲ್ಲದೆ ನಡೆಯುವುದು ತೀರಾ ವಿರಳ ಎಂಬುದನ್ನು ಜಗತ್ತಿನ ವಿವಿಧ ಭಾಗಗಳಲ್ಲಿ ಕೈಗೊಂಡ ಪ್ರತಿಯೊಂದು ಅಧ್ಯಯನವೂ ಸೂಚಿಸುತ್ತವೆ. ಭಾರತೀಯ ಸಂದರ್ಭದಲ್ಲಿ, ಪೌರನೀತಿ ಶಿಕ್ಷಣವನ್ನು ಬಾಯಿಪಾಠದ ಕಲಿಕಾ ವಿಧಾನದಿಂದ ಬದಲಾಯಿಸಿ, ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಕೊಂಡು ಮಾಡುವುದೇ ಅತ್ಯಂತ ದೊಡ್ಡ ಸವಾಲಾಗಿದೆ. ಈ ಸವಾಲನ್ನು ಮನಸ್ಸಿನಲ್ಲಿರಿಸಿ, ವೀ ದ ಪೀಪಲ್ ಅಭಿಯಾನವು, ಶಾಲೆಗಳಲ್ಲಿ ಪೌರನೀತಿಯನ್ನು ಕಲಿಯುವ ವಿಧಾನಗಳಲ್ಲಿ ಬದಲಾವಣೆ–ಯಾಗುವಂತೆ ಮಾಡಲು ಪ್ರಯತ್ನಿಸಿದೆವು. ಆ ಮೂಲಕ ವಿಷಯವು ಆಸಕ್ತಿದಾಯಕವೂ, ಪ್ರಾಯೋಗಿಕವೂ ಮತ್ತು ನಮ್ಮ ಬದುಕಿಗೆ ಪ್ರಸ್ತುತವೂ ಆಗುವಂತೆ ಮಾಡಿದೆವು. ಹಾಗಿದ್ದರೂ, ಅಂತಿಮವಾಗಿ ಶಿಕ್ಷಕರ ಸಾಮರ್ಥ್ಯಾಭಿವೃದ್ಧಿ ಮತ್ತು ಪ್ರಯೋಗಕ್ಕೆ ಇಳಿಯುವ ಅವರ ಇಚ್ಛಾಶಕ್ತಿಯು ಈ ಕೆಲಸದ ಯಶಸ್ಸಿಗೆ ಅವಶ್ಯಕ ಸಂಗತಿಯಾಗುತ್ತದೆ.

ಪರಾಮರ್ಶನ:

For the study in Maharashtra schools, NCERT's 'Journal of Indian Education' (Volume XLV, Number 2, August 2019) https://ncert.nic.in/pdf/publication/journalsandperiodicals/journalofindianeducation/JIE_AUGUST2019.pdf

Film: https://youtu.be/u6EB6lNiJ3M



ನೇಹಾ ಯಾದವ್ ಅವರು 'ವಿ ದ ಪೀಪಲ್ ಅಭಿಯಾನ್'ನ ಪಾಲುದಾರಿಕೆಗಳ ಮುಖ್ಯಸ್ಥರಾಗಿದ್ದಾರೆ. ಅವರು ಜನರಿಗೆ ತಮ್ಮ ಹಕ್ಕುಗಳನ್ನು ಎತ್ತಿಹಿಡಿಯುವುದು ಸಾಧ್ಯವಾಗುವಂತೆ ಸಶಕ್ತಗೊಳಿಸುವ ಬಗ್ಗೆ ಮತ್ತು ಸಂವಿಧಾನದ ಮೌಲ್ಯಗಳು ಜನರ ದಿನನಿತ್ಯದ ಬದುಕಿನ ದೃಷ್ಟಿಕೋನವಾಗುವಂತೆ ಮಾಡುವ ಬಗ್ಗೆ ತೀವ್ರ ಆಸಕ್ತಿ ಇರುವವರು. ಸಹಯೋಗ ಕೇಂದ್ರಿತ ಕಾರ್ಯಕ್ರಮದ ಮೂಲಕ ಜನರು ಪೌರರಾಗಿ ತಮ್ಮ ಪಾತ್ರಗಳನ್ನು ಅರ್ಥಮಾಡಿಕೊಳ್ಳುವಂತೆ ಸಶಕ್ತಗೊಳಿಸಲು ಬೇಕಾದ ಕಾರ್ಯತಂತ್ರ, ವಿನ್ಯಾಸ ಮತ್ತು ಅನುಷ್ಠಾನವನ್ನು ರೂಪಿಸುವುದು ಅವರ ಮುಖ್ಯ ಗಮನವಾಗಿದೆ. ನೇಹಾ ಅವರು ಕ್ಲೆಮ್‌ಸನ್ ವಿಶ್ವವಿದ್ಯಾಲಯದ ಎಂಜಿನಿಯರಿಂಗ್ ಪದವೀಧರೆಯಾಗಿದ್ದಾರೆ ಮತ್ತು ಸ್ಕೂಲ್ ಆಫ್ ಇನ್‌ಸ್ಪೈರ್ಡ್ ಲೀಡರ್‌ಶಿಪ್‌ನಲ್ಲಿ ಎಂಬಿಎ ಮಾಡಿದ್ದಾರೆ. ಅವರ ಸಂಪರ್ಕ: nyadav.ba@gmail.com



ಅಸ್ಮಿತಾ ತಿವಾರಿಯವರು ವಿ ದ ಪೀಪಲ್ ಅಭಿಯಾನದ ವಿಷಯ ಸಂರಚನೆ ವಿಭಾಗದ ಪ್ರೋಗ್ರಾಂ ಮ್ಯಾನೇಜರ್ ಆಗಿದ್ದಾರೆ. ಅವರು ಅಭಿವೃದ್ಧಿ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ಸಕ್ರಿಯರಾಗಿದ್ದಾರೆ. ಅವರ ಔಪಚಾರಿಕ ಶಿಕ್ಷಣವು ರಾಜಕೀಯ ಶಾಸ್ತ್ರದಲ್ಲಿ ಎಂಎ ಮತ್ತು ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿಯನ್ನು ಒಳಗೊಂಡಿದೆ. ವಿವಿಧ ಹಿನ್ನೆಲೆಯ ಭಾಗೀದಾರರಿಗೆ ಸಾಂದರ್ಭಿಕ, ಚಿಂತನಾತ್ಮಕ ಮತ್ತು ಪ್ರತ್ಯಕ್ಷ ತೊಡಗಿಕೊಳ್ಳುವಿಕೆಗೆ ಬೇಕಾದ ಕಲಿಕಾ ವಿನ್ಯಾಸಗಳನ್ನು ಮಾಡುವುದು ಮತ್ತು ಫಲಶ್ರುತಿಯ ಅವಲೋಕನವು ಅವರ ಪಾತ್ರವಾಗಿದೆ. ಅವರ ಸಂಪರ್ಕ: asmyta.tiwari@wethepeople.com

---

ಅನುವಾದ: **ರಾಮಕೃಷ್ಣ ಭಟ್** । ಪರಿಶೀಲನೆ: **ಚಂದ್ರಶೇಖರ ಮಂಡೆಕೋಲು**